ಬಿ.ಎಲ್. ವೇಣು

ಕಲೆ: ಮುರಳೀಧರ ರಾಠೋಡ್

# ಹೀಗೊಂದು ಮ್ಯೂಸಿಕಲ್ ಲವ್ ಸ್ಟೋರಿ

ನಾನು ಮೋಹನ। ನೀನು ಕಲ್ಯಾಣಿ।
ನಾನು ಶಂಕರಾಭರಣ। ನೀನು ಆನಂದ ಭೈರವಿ।
ನಾನು ಹಂಸಧ್ವನಿ। ನೀನು ವಸಂತ॥

ಕೆಂಪನೆಯ ನೀಳಕಾಯದ ಹುಡುಗ ಈ ಎಲ್ಲಾ ರಾಗಗಳನ್ನೂ ಸ್ವರಲಯಬದ್ಧವಾಗಿ ಹಾಡುತ್ತಾ, ಈ ಎಲ್ಲಾ ರಾಗಗಳು ಮಿಕ್ಸ್ ಆದರೆ ಪ್ರೇಮರಾಗ ಉತ್ಪತ್ತಿ ಅಂತ ವ್ಯಾಖ್ಯಾನಿಸುತ್ತಾನೆ. ಈ ಹುಡುಗ ಸುಶ್ರಾವ್ಯವಾಗಿ ಹಾಡುವುದನ್ನು ಕೇಳದವರು ಪ್ರಾಯಶಃ ಧರ್ಮಶಾಲಾ ರಸ್ತೆಯಲ್ಲಿ ಅಪರೂಪ. ಧರ್ಮಶಾಲಾ ರಸ್ತೆ ಒಂಥರಾ ದೊಂಬಿದಾಸರ ಬೀದಿ ಅಂತಲೂ ಪ್ರಸಿದ್ಧ. ಓಣಿಯಂತಹ ಸಂದುಗೊಂದುಗಳನ್ನು ಉದರದಲ್ಲಿರಿಸಿಕೊಂಡಿರುವ ಈ ಬೀದಿ ಮದ್ರಾಸ್‌ನ ಬರ್ಮಾ ಬಜಾರ್‌ನಂತೆ ಹಗಲುರಾತ್ರಿ ಗಿಜಿಗುಟ್ಟುತಿರುತ್ತೆ. ಕೇರಿಗೆ ಹೆಚ್ಚೆನ್ನಿಸುವಷ್ಟು ಕಿರಾಣಿ ಅಂಗಡಿಗಳಿವೆ. ವ್ಯಾಪಾರ ಮಾಡುವವರಿಗಿಂತ ಸಂಗೀತ ಶಾಲೆಗೆ ಹೋಗಿಬರುವ ಹುಡುಗಿಯರನ್ನು ಪಿಳಿಪಿಳಿಸುತ್ತಾ ಅಂಗಡಿಗಳ ಬಳಿ ನಿಲ್ಲಲೆಂದೇ ಕಾಯಂ ಸಿಗರೇಟ್ ಗಿರಾಕಿಗಳಾಗಿರುವ ಪಡ್ಡೆಗಳೂ ಇವೆ. ಪಿಯು ಢುಂಕಿ ಹೊಡೆದು ನಿರುದ್ಯೋಗಿಗಳಾದ ಇವರ ಟೈಮ್‌ಪಾಸ್‌ಗೆಂದೇ ಒಂದು ಟೀ ಹೋಟೆಲ್ ಇದೆ. ಗರಿಗರಿಯಾಗಿ ಬಟ್ಟೆ ಇಸ್ತ್ರಿಮಾಡಿಕೊಡಲೊಂದು ದೋಬಿಶಾಪ್. ಇವರು ಎಲ್ಲಿ ಬೇಕಾದರೂ ಶಿಫ್ಟ್ ಬದಲಾಯಿಸಿ ನಿಲ್ಲಲೆಂದೇ ಸ್ಥಾಪಿತವಾದ ವಡೆ ಮೆಣಸಿನಕಾಯಿ ಡಬ್ಬಾ ಅಂಗಡಿ, ಪರಿಮಳ ಕಾಫಿ ವರ್ಕ್ಸ್, ಮದಕರಿ ವ್ಯಾಯಾಮಶಾಲೆ, ಸೊಪ್ಪಿನ ಮಾರ್ಕೆಟ್, ಅದರ ಎದುರು ಆಂಜನೇಯನ ಟೆಂಪಲ್, ಅಲ್ಲಿನ ಅರಳಿಮರ ಸುತ್ತಲು ಬರುವ ಹುಡುಗಿಯರಿಗಾಗಿ ಕಾಯುವ ಮಾಡರ್ನ್ ಮಾರುತಿ ಗ್ಯಾಂಗ್, ಪಾರ್ಟ್ ಟೈಮ್ ಕಲ್ಯಾಣ ಮಂದಿರವಾಗುವ ಉತ್ತರಾಧಿಮಠ, ಕೆಳಗಿಳಿದರೆ ಸದಾ ಫಂಕ್ಷನ್‌ಗಳಿಂದ ಅಲಂಕೃತಗೊಂಡ ಮಹಿಳಾಮಣಿಗಳ ಅಕ್ಕಮಹಾದೇವಿ ಸಮಾಜ, ಹತ್ತಿರದಲ್ಲೇ ಪತಂಜಲಿ ಆಸ್ಪತ್ರೆ, ಕೋಮಲ ಹೆರಿಗೆ ಆಸ್ಪತ್ರೆ. ಸನಿಹದಲ್ಲೇ ಬೀದಿಯು ಮುಖ್ಯ ರಸ್ತೆಗೆ ಸೇರುವುದರಿಂದಾಗಿ ಅಲ್ಲಲ್ಲಿ